# 1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನಾ.ದ. ಭದ್ರಾವತಿ

## ಸಿ.ಸಿ ನಂಃ 2116/2024

ಚಾ.ಸಾಃ 4 ಪ್ರಾ.ಸಾಃ 3

| | | |
|---|---|---|
| ಹೆಸರು | : | ಶ್ವೇತಾ |
| ತಂದೆಯ ಹೆಸರು | : | ತಿಮ್ಮಯ್ಯ |
| ವಯಸ್ಸು | : | 16 ವರ್ಷ |
| ಉದ್ಯೋಗ | : | ವಿದ್ಯಾರ್ಥಿನಿ |
| ವಾಸಸ್ಥಳ | : | ಸಿದ್ದರ ಕಾಲೋನಿ. |

**ದಿನಾಂಕಃ 01.09.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿಯವರಿಂದಃ**

ಚಾ.ಸಾ–1 ನನ್ನ ತಾಯಿ. ಚಾ.ಸಾ–5 ನನ್ನ ದೊಡ್ಡಮ್ಮ. ಚಾ.ಸಾ–6 ನನ್ನ ಅಕ್ಕ. ಚಾ.ಸಾ–2 ನನ್ನ ಅಣ್ಣ. ನನಗೆ ಚಾ.ಸಾ–3 ರವರ ಪರಿಚಯ ಇದೆ. 1 ಮತ್ತು 2 ನೇ ಆರೋಪಿತರು ನನ್ನ ಮಾವಂದಿರು ಮತ್ತು 3 ನೇ ಆರೋಪಿ ನನ್ನ ಅಜ್ಜಿ.

ಆರೋಪಿತರು ಮತ್ತು ಚಾ.ಸಾ–1 ಮತ್ತು 5 ರವರ ನಡುವೆ ಯಾವುದೇ ಗಲಾಟೆ ನಡೆದಿರುವುದಿಲ್ಲ. ಆರೋಪಿತರು ನನ್ನ ಮತ್ತು ಚಾ.ಸಾ–1 ಮತ್ತು 5 ರವರ ಮೇಲೆ ಹಲ್ಲೆ ಮಾಡಿರುವುದಿಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ಆರೋಪಿತರು ನನಗೆ ಯಾವುದೇ ಜೀವ ಬೆದರಿಕೆ ಹಾಕಿರುವುದಿಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಸಂದರ್ಭದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕಃ **22.01.2023** ರಂದು ಬೆಳಗ್ಗೆ **8.30** ಗಂಟೆಗೆ ನಾನು ಬಚ್ಚಲು ಮನೆಯಲ್ಲಿ ಸ್ನಾನ ಮಾಡುತ್ತಿದ್ದಾಗ **1** ನೇ ಆರೋಪಿ ಕಿಟಕಿಯಲ್ಲಿ ಇಣಕಿ ನೋಡುತ್ತಿದ್ದ ಎಂದರೆ ಸರಿಯಲ್ಲ. ನಾನು ಆತನಿಗೆ ಕಿಟಕಿಯಲ್ಲಿ ಏಕೆ ನೋಡುತ್ತೀಯಾ ಎಂದು ಕೇಳಿದಾಗ ಆತನು ಚಾ.ಸಾ–1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾ.ಸಾ–5 ರವರಿಗೂ ಅವಾಚ್ಯ ಶಬ್ದಗಳಿಂದ ಬೈದು ದೂಡಿ ಚಾ.ಸಾ–1 ರವರ ಕಪಾಳಕ್ಕೆ ಕೈಯಿಂದ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಚಾ.ಸಾ–1 ರವರ ತಲೆ ಕೂದಲು ಹಿಡಿದು ಎಳೆದಾಡಿ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿಯಲ್ಲ. ಜಗಳವನ್ನು ಚಾ.ಸಾ–6 ಮತ್ತು 7 ರವರು ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಪೋಲೀಸರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿರುವ ಕಾರಣ ಸಾಕ್ಷಿಯ ಹೇಳಿಕೆಯನ್ನು ನಿ.ಪಿ–**5** ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಎಸ್ ಪಿ ವಕೀಲರಿಂದ**

ಆರೋಪಿ ಪರ ವಕೀಲರು ಏನೂ ಇಲ್ಲ ಎಂದು ನುಡಿದಿರುತ್ತಾರೆ.

(ಮರು ವಿಚಾರಣೆ ಇಲ್ಲ.)

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ನಾಸಿರಬಾನು)
1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಭದ್ರಾವತಿ.